ಊ) ಉದ್ಭವಿಸುವುದಿಲ್ಲ.

ಮದ್ಯ ಮಾರಾಟ ವೇಳೆ ನಿಗದಿ

457 (963) ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮೀಲೇಔಟ್):– ಮಾನ್ಯ ಅಬಕಾರಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬೆಂಗಳೂರು ನಗರದಲ್ಲಿ ಎಷ್ಟು ಮದ್ಯದಂಗಡಿಗಳಿವೆ ; ಮಾರಾಟ ಮಾಡಲು ನಿಗದಿಪಡಿಸಿರುವ ಸಮಯವೆಷ್ಟು (ವಿವರವಾದ ಮಾಹಿತಿ ನೀಡುವುದು) ;

ಆ) ಮದ್ಯದಂಗಡಿ ಪಕ್ಕದಲ್ಲಿ ಚಾಕಣ ಅಂಗಡಿಗಳನ್ನು ಸರ್ಕಾರದ ಅನುಮತಿ ಪಡೆಯದೇ ತೆರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮವೇನು ;

ಈ) ಬೆಂಗಳೂರು ನಗರದಲ್ಲಿರುವ ಮದ್ಯದಂಗಡಿಗಳು ನಿಗದಿಪಡಿಸಿರುವ ಸಮಯ ಮೀರಿ ಮದ್ಯ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು):–

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 838 ಮದ್ಯದ ಅಂಗಡಿಗಳಿವೆ. ಮದ್ಯ ಮಾರಾಟ ಮಾಡಲು ನಿಗದಿಪಡಿಸಿರುವ ಸಮಯ ಬೆಳಿಗ್ಗೆ 10.00 ರಿಂದ ರಾತ್ರಿ 10.30 ರವರೆಗೆ.

ಆ) ಹೌದು, ಆದರೆ ಸದರಿ ಅಂಗಡಿಗಳನ್ನು ತೆರೆಯಲು ಅನುಮತಿ ನೀಡುವುದು ಅಬಕಾರಿ ಇಲಾಖೆಯ ಕಾರ್ಯವ್ಯಾಪ್ತಿಯಲ್ಲಿ ಬರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಬಂದಿದೆ.

ಉ) ಸನ್ನದುದಾರರ ವಿರುದ್ಧ ಸನ್ನದಿನ ಷರತ್ತಿನ ಉಲ್ಲಂಘನೆಗಾಗಿ ಒಟ್ಟು 123 ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ ಹಾಗೂ ಸಿಬ್ಬಂದಿಯಿಂದ ಇಂತಹ ಅಕ್ರಮಗಳನ್ನು ನಿಯಂತ್ರಿಸಲು ಪ್ರತಿದಿನ ರಸ್ತೆ–ಗಸ್ತು ಮತ್ತು ದಾಳಿ ಕಾರ್ಯಕ್ಕೆಗೊಳ್ಳಲಾಗುತ್ತಿದೆ.

ಪಶು ಚಿಕಿತ್ಸಾಲಯ

459 (966) ಶ್ರೀ ನೆ.ಲ.ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್):– ಮಾನ್ಯ ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಹಾಲಕ್ಷ್ಮೀಪುರಂ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪಶು ಚಿಕಿತ್ಸಾಲಯಗಳಲ್ಲಿ ಪಶು ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಎಷ್ಟು ಹುದ್ದೆಗಳ ಕೊರತೆ ಇದೆ (ಹುದ್ದೆಗಳ ವಿವರ ನೀಡುವುದು) ;

ಇ) ಕೊರತೆ ಇರುವ ಅಧಿಕಾರಿ/ಸಿಬ್ಬಂದಿಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ;

ಈ) ಪಶುಚಿಕಿತ್ಸಾಲಯಗಳಲ್ಲಿ ಪಶು ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಹಾಗಿದ್ದಲ್ಲಿ, ಈ ಕೊರತೆಗಳನ್ನು ನೀಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ರೇವೂ ನಾಯಕ್ ಬೆಳಮಗಿ(ಪಶುಸಂಗೋಪನಾ ಸಚಿವರು):–

ಅ) ಇಲ್ಲ.

ಆ) ಹುದ್ದೆಗಳ ಕೊರತೆ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

ಉ) ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಸಿ.ಡಿ. ನಿರ್ಮಾಣ

462 (882) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಪ್ಪೂರು–ಮಾಂಪೂರು, ಪಿ.ಎಂ.ಜಿ.ಎಸ್.ವೈ. ರಸ್ತೆಯಲ್ಲಿ ಬರುವ ಸುಮಾರು 24 ಸಿ.ಡಿ.ಗಳ ನಿರ್ಮಾಣ ಮಾಡುವ ಕೆಲಸ ಯಾವ ಹಂತದಲ್ಲಿದೆ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–

ಅ) ಬಪ್ಪೂರು–ಮಾಂಪೂರು ರಸ್ತೆಯಲ್ಲಿ 22 ಅಡ್ಡಮೋರಿಗಳ (ಸಿ.ಡಿ.) ನಿರ್ಮಾಣ ಕಾಮಗಾರಿ ಒಳಗೊಂಡಿದ್ದು, ಪಿ.ಎಂ.ಜಿ.ಎಸ್.ವೈ. ಅಡಿ ಅನುಮೋದನೆ ಯಾದ ಈ ಎಲ್ಲಾ ಅಡ್ಡಮೋರಿಗಳ ಪಾಯದ ಕೆಲಸವು ಪ್ರಗತಿಯಲ್ಲಿದೆ.